# 42

# ಕೊನೆ ಕ್ಷಣದ ಸಿದ್ಧತೆಗಳು

# (16:21-28)

ಯೇಸು ತಾನು ಬರಬೇಕಾದ ಮೆಸ್ಸೀಯನು ಮತ್ತು ದೇವರ ಕುಮಾರನು ಎಂದು ಹೇಳುವಾಗ ಅದನ್ನು ಗ್ರಹಿಸಿಕೊಳ್ಳಲು ಶಿಷ್ಯರಿಗೆ ಬಹಳ ಸಮಯ ಬೇಕಾಗಿತ್ತು. ಈಗ ಆತನು ಅವರಿಗೆ ಬೋಧಿಸುವದನ್ನು ಮುಂದುವರೆಸುತ್ತಾ ಅವರಿಗೆ ತಾನು ಸಾಯಬೇಕು ಎಂದು ಹೇಳುತ್ತಾನೆ.

## ಶಿಲುಬೆಗೆ ಹತ್ತಿರವಾಗುತ್ತಿರುವದು ಮತ್ತು ಯೇಸು ತನ್ನ ಮರಣ ಹತ್ತಿರವಾಗುತ್ತಿರುವ ವಿಷಯವನ್ನು ಮೊದಲನೆ ಸಾರಿ ಪ್ರಕಟಣೆ ಮಾಡಿದ್ದು (16:21-23)

**21ಅಂದಿನಿಂದ ಯೇಸು ಕ್ರಿಸ್ತನು ತಾನು ಯೆರೂಸಲೇಮಿಗೆ ಹೋಗಿ ಅಲ್ಲಿ ಹಿರಿಯರಿಂದಲೂ ಮಹಾಯಾಜಕರಿಂದಲೂ ಶಾಸ್ತ್ರಿಗಳಿಂದಲೂ ಬಹು ಕಷ್ಟಗಳನ್ನನುಭವಿಸಿ ಕೊಲ್ಲಲ್ಪಟ್ಟು ಮೂರನೆಯ ದಿನದಲ್ಲಿ ಜೀವಿತನಾಗಿ ಎಬ್ಬಿಸಲ್ಪಡಬೇಕೆಂದು ತನ್ನ ಶಿಷ್ಯರಿಗೆ ತಿಳಿಸುವದಕ್ಕೆ ಪ್ರಾರಂಭಮಾಡಿದನು. 22ಆಗ ಪೇತ್ರನು ಆತನ ಕೈ ಹಿಡಿದು - ಸ್ವಾಮೀ, ದೇವರು ನಿನ್ನನ್ನು ಕಾಯಲಿ; ನಿನಗೆ ಹೀಗೆ ಎಂದಿಗೂ ಆಗಬಾರದು ಎಂದು ಆತನನ್ನು ಗದರಿಸುವದಕ್ಕೆ ಪ್ರಾರಂಭಿಸಲು 23ಆತನು ತಿರುಗಿಕೊಂಡು ಪೇತ್ರನಿಗೆ - ಸೈತಾನನೇ, ನನ್ನ ಮುಂದೆ ನಿಲ್ಲಬೇಡ, ನಡೆ, ನನಗೆ ನೀನು ವಿಘ್ನವಾಗಿದ್ದೀ; ನಿನ್ನ ಯೋಚನೆ ಮನುಷ್ಯರ ಯೋಚನೆಯೇ ಹೊರತು ದೇವರದಲ್ಲ ಎಂದು ಹೇಳಿದನು.**

**ವಚನ 21. ಅಂದಿನಿಂದ** (ನೋಡಿರಿ 4:17) ಯೇಸುವಿನ ಸೇವೆಯಲ್ಲಿ ಹೊಸ ಹಂತವನ್ನು ಸೂಚಿಸುತ್ತದೆ. ಗಲಿಲಾಯದಲ್ಲಿ ಆತನ ಕಾರ್ಯ ಮುಕ್ತಾಯ ಹಂತಕ್ಕೆ ಬಂದಿದೆ ಮತ್ತು ತನ್ನ ಗಮನವನ್ನು ಯೆರೂಸಲೇಮಿಗೆ ಹರಿಸುತ್ತಿದ್ದಾನೆ (ನೋಡಿರಿ 19:1). ಈಗ ಗೊಲ್ಗೊಥದ ನೆರಳು ಆತನ ಮೇಲೆ ಬಂದಿದೆ. ವಾಕ್ಯಭಾಗದಲ್ಲಿ ಆದಿಕಾಂಡ 3:15ರಿಂದ ಮುಂದೆ ಈ ಒಂದು ಪ್ರಹಸನಾತ್ಮಕ ಘಟನೆಯನ್ನು ಸೂಚಿಸುತ್ತಾ ಬಂದಿದೆ. ಆತನು ಯೆರೂಸಲೇಮಿನೆಡೆಗೆ ನಡೆದನು, ಮತ್ತು ಆತನು ಹಿಂತಿರುಗಿ ನೋಡಲಿಲ್ಲ, ರಕ್ಷಣೆಯ ಸಂದೇಶವನ್ನು ಇಡೀ ಲೋಕಕ್ಕೆ ಕೊಂಡೊಯ್ಯಬೇಕೆಂದು ಆತನು ಬಯಸುತ್ತಿದ್ದ ಜನರು ಇನ್ನೂ ಆತ್ಮೀಕ ತಿಳುವಳಿಕೆಯಲ್ಲಿ ಅಪ್ರಭುದ್ಧರಾಗಿದ್ದಾರೆ ಎಂಬುದು ಯೇಸುವಿಗೆ ತಿಳಿದಿತ್ತು. ಆತನಿಗೆ ಅವರಿಗೆ ಬೋಧಿಸುವದು ಬಹಳವಿತ್ತು ಆದರೆ ಆತನು ಸ್ವಲ್ಪ ಸಮಯದಲ್ಲಿ ಈ ಕಾರ್ಯವನ್ನು ನೆರವೇರಿಸಬೇಕಾಗಿತ್ತು.

**ಯೇಸು ತನ್ನ ಶಿಷ್ಯರಿಗೆ ಆತನು ಯೆರೂಸಲೇಮಿಗೆ ಹೋಗಬೇಕು ಮತ್ತು ಅಲ್ಲಿ ಅನೇಕ ಸಂಕಟಗಳನ್ನು ಅನುಭವಿಸಬೇಕೆಂದು** ಅವರಿಗೆ ಹೇಳುತ್ತಿದ್ದನು. 16:1ನೇ ವಚನದಲ್ಲಿ ಫರಿಸಾಯರು ಮತ್ತು ಸದ್ದುಕಾಯರು ಯೇಸುವನ್ನು ತಮಗೆ ಒಂದು ಸೂಚಕ ಕಾರ್ಯವನ್ನು "ತೋರಿಸುವಂತೆ" (*epideiknumi*) ಕೇಳಿಕೊಂಡರು, ಆದರೆ ಆತನು ತೋರಿಸಲಿಲ್ಲ. ಇಲ್ಲಿ ಯೇಸು ಭವಿಷ್ಯತ್ತಿನಲ್ಲಿ ಏನಾಗುತ್ತದೆ ಎಂಬುದನ್ನು ತನ್ನ ಶಿಷ್ಯರಿಗೆ "ತೋರಿಸಲು" (*deiknumi*) ಪ್ರಾರಂಭಮಾಡಿದನು. ಯೇಸುವಿನೊಂದಿಗಿರುವ ಅವರ ಸಂಬಂಧ ಅವರಿಗೆ ವಿಶೇಷ ಪ್ರಯೋಜನಾರ್ಥ ಪ್ರಕಟನೆಗಳನ್ನು ಸ್ವೀಕರಿಸಲು ಅವಕಾಶ ಮಾಡಿಕೊಂಡರು (13:11).[1] ಕ್ರಿಯಾಪದ

(*dei*) ಇದು ದೈವೀಕ ಅವಶ್ಯಕತೆಯನ್ನು ತೋರಿಸುತ್ತದೆ; ಆತನು ಕಷ್ಟವನ್ನನುಭವಿಸುವದು ಆತನ ವಿಷಯದಲ್ಲಿ "ದೇವರ ಚಿತ್ತವಾಗಿದೆ" (26:39, 42; ಅಪೊಸ್ತಲರ ಕೃತ್ಯಗಳು 2:23).

ಕರ್ತನ ಶ್ರಮಾನುಭವ ಹಿರಿಯರು, ಮತ್ತು **ಮಹಾಯಾಜಕರಿಂದ ಮತ್ತು ಶಾಸ್ತ್ರಿಗಳಿಂದ ಚುಚ್ಚಿಕೊಟ್ಟು ಎತ್ತಿಕಟ್ಟಿರುವಂಥದ್ದಾಗಿದೆ.** "ಹಿರಿಯರು" ಎಂದರೆ ತಮ್ಮ ಜ್ಞಾನ ಮತ್ತು ಅನುಭವದಿಂದಾಗಿ ಗೌರವಿಸಲ್ಪಡುತ್ತಿದ್ದ ನಾಯಕರು. "ಮಹಾಯಾಜಕರು" ಆಡಳಿತ ವರ್ಗದ ಸದಸ್ಯರು, ಅವರು ಸಾಮಾನ್ಯವಾಗಿ ಸದ್ದುಕಾಯರೊಂದಿಗೆ ಒಂದಾಗಿರುತ್ತಿದ್ದರು. "ಶಾಸ್ತ್ರಿಗಳು" ಅಥವಾ "ಧರ್ಮೋಪದೇಶಕರು" ಶಿಕ್ಷಿತ ಗುರುಗಳು (NIV); ಅವರು ವಿಶಿಷ್ಟವಾಗಿ ಫರಿಸಾಯರು. ಮೂರು ಹಂತದ ವರ್ಣನೆ ಸನ್ಹೇದ್ರಿನ್, ಯೆರೂಸಲೇಮಿನಲ್ಲಿದ್ದ ಯೆಹೂದ್ಯ ಸದಸ್ಯರ ಮಂಡಳಿಯನ್ನು ಸೂಚಿಸುತ್ತದೆ. ಅವರು ಯೇಸುವನ್ನು ಗೌರವಿಸುವದರಲ್ಲಿ ಮತ್ತು ಆರಾಧಿಸುವದರಲ್ಲಿ ಮೊದಲಿಗರಾಗಿದ್ದ ಈ ಜನರೇ ಆತನನ್ನು ಬಾಧಿಸುವದಕ್ಕೆ ಮತ್ತು ಆತನ ಮರಣಕ್ಕೆ ಕರೆನೀಡುವದಕ್ಕೆ ಕಾರಣರಾದರು![2]

ಕ್ರಿಸ್ತನು ನಿರ್ಧಿಷ್ಟವಾಗಿ ತಾನು **ಕೊಲ್ಲಲ್ಪಡುವೆನು** ಎಂಬುದನ್ನು ಪ್ರವಾದಿಸಿದನು. ತಾನು ಎಂಥಹಾ ಮರಣವನ್ನು ಹೊಂದಲಿಕ್ಕಿದ್ದೇನೆ ಎಂಬುದರ ಕುರುಹನ್ನು ನೀಡಿದನು (9:15; 12:39, 40; ಯೋಹಾನ 2:19; 3:14; 6:51), ಆದರೆ ಇದು ಅದರ ಕುರಿತಾದ ಮೊದಲನೆಯ ಸ್ಪಷ್ಟವಾದ ಹೇಳಿಕೆಯಾಗಿದೆ (ನೋಡಿರಿ 17:22, 23; 20:17-19; 26:2). ಇದಕ್ಕೆ ಸಮಾನ ವಾಗಿ ಮಾರ್ಕನ ಸುವಾರ್ತೆಯಲ್ಲಿರುವ ವಾಕ್ಯಭಾಗವು ಈ ರೀತಿಯಾಗಿ ಹೇಳುತ್ತದೆ, "ಆತನು ಈ ಮಾತನ್ನು ಏನು ಗುಂಬವಿಲ್ಲದೆ ಹೇಳಿದನು" (ಮಾರ್ಕ 8:32). ಈ ಪ್ರವಾದನೆಯಲ್ಲಿ ಯೇಸು ತನ್ನ ಮರಣದ ರೀತಿಯ ಕುರಿತು ಸ್ಪಷ್ಟವಾಗಿ ಪ್ರಕಟಿಸಲಿಲ್ಲ, ಆದಾಗ್ಯೂ 16:24ರಲ್ಲಿ ಇದನ್ನು ಸೂಚಿಸಲಾಗಿದೆ. ಮುಂದಿನ ಪ್ರವಾದನೆಯಲ್ಲಿ, ಅದು ಶಿಲುಬೆಯ ಮರಣ ಎಂದು ಸ್ಪಷ್ಟಪಡಿಸುತ್ತಾನೆ (20:17-19). ಬಹುಶಃ ಹಳೆ ಒಡಂಬಡಿಕೆಯ ಪ್ರವಾದನೆಯ ಮೂಲಕ ಈ ಸತ್ಯವನ್ನು ಮೊದಲೇ ತಿಳಿದಿದ್ದರು (ಕೀರ್ತನೆ 22:16-18; ಯೆಶಾಯ 53:1-12).

ಯೇಸು ತಾನು **ಮೂರನೆಯ ದಿನದಲ್ಲಿ ಎದ್ದು ಬರುತ್ತೇನೆಂದು** ಸಹ ವಿವರಿಸಿದನು. "ದೇವರು (ಆತನ) ಜೀವಾತ್ಮವನ್ನು ಪಾತಾಳದಲ್ಲಿ ಬಿಡುವದಿಲ್ಲ, ತನ್ನ ಪ್ರಿಯನಿಗೆ ಕೊಳೆಯುವ ಅವಸ್ಥೆಯನ್ನು ಪರಿಶುದ್ಧನು ಕೊಳೆಯುವ ಅವಸ್ಥೆಯನ್ನುಂಟು ಮಾಡುವದಿಲ್ಲ" (ಅಪೊಸ್ತಲರ ಕೃತ್ಯಗಳು 2:27). ಮೂರನೇ ದಿನದಲ್ಲಿ ಕ್ರಿಸ್ತನ "ಪುನರುತ್ಥಾನ" - "ಮೂರು ದಿನಗಳ ನಂತರ" ಎಂಬ ಇಬ್ರಿಯ ವ್ಯಕ್ತಪಡಿಸುವಿಕೆಗೆ ಸಮಾನವಾಗಿದೆ - ಇದು ದೇವರ ವಾಕ್ಯದ ಸಾಕ್ಷಿಗೆ ಹೊಂದಿಕೆಯಾಗಿದೆ.[3] ಯೇಸುವಿಗೆ ತನ್ನ ಶ್ರಮೆಯ ಕುರಿತಾದ ಮುಂದಿನ ಜ್ಞಾನವನ್ನು, ಆತನು ತನ್ನ ಶಿಷ್ಯರಿಗೆ ಕೆಲವು ಸಂದರ್ಭಗಳಲ್ಲಿ ಪ್ರಕಟಿಸಿದ್ದನು, ಅವನು ಜೀವಿತನಾಗಿ ಬಂದ ನಂತರ ಅವರ ನಂಬಿಕೆಯನ್ನು ಬಲಪಡಿಸಿದ್ದನು (ಲೂಕ 24:44-49; ಯೋಹಾನ 14:29; 16:1, 4, 33).

**ವಚನ 22.** ಯೇಸು ಕ್ರಿಸ್ತನಾಗಿದ್ದಾನೆ ಎಂಬ ಪೇತ್ರನ ಅರಿಕೆಯ ದೃಷ್ಟಿಕೋನದಲ್ಲಿ (16:16), ಯೇಸುವಿನ ಸಾವಿನ ಸಮಾಚಾರವು ಆಘಾತವನ್ನುಂಟು ಮಾಡುವದಾಗಿತ್ತು. **ಪೇತ್ರನು ಆತನನ್ನು ಪಕ್ಕಕ್ಕೆ ತೆಗೆದುಕೊಂಡು ಗದರಿಸಲು** ಪ್ರಾರಂಭಿಸಿದನು. ಪೇತ್ರನ ವರ್ತನೆ ಯಾವಾಗಲೂ ಅಸಾಮಾನ್ಯವಾದವುಗಳು ಎಂಬುದಂತು ಸತ್ಯ. ಗುರುವನ್ನು ತಿದ್ದುವದು ಸಂಪ್ರದಾಯದ ವಿರುದ್ಧವಾಗಿತ್ತು, ಅದಕ್ಕೂ ಹೆಚ್ಚಾಗಿ ಆತನನ್ನು "ಗದರಿಸುವದು" ತಪ್ಪಾದ ಕಾರ್ಯವಾಗಿದೆ.[4] **ಸ್ವಾಮೀ, ದೇವರು ನಿನ್ನನ್ನು ಕಾಯಲಿ; ನಿನಗೆ ಹೀಗೆ ಎಂದಿಗೂ ಆಗಬಾರದು** ಅಂದನು. ಮೆಸ್ಸೀಯನು ಶ್ರಮೆಯನ್ನು ಅನುಭವಿಸಬೇಕೆಂಬ ವಿಚಾರವನ್ನು ವ್ಯತಿರಿಕ್ತವಾದ ದಿಶೆಯಲ್ಲಿ ವಿರೋಧಿಸಿದನು (1 ಕೊರಿಂಥ 1:23). ಮೆಸ್ಸೀಯನು ಇಸ್ರಾಯೇಲರನ್ನು ವೈರಿಗಳಿಂದ ಬಿಡುಗಡೆಗೊಳಿಸಿ ದುಷ್ಟರನ್ನು ಇಸ್ರಾಯೇಲನಲ್ಲಿಯೇ ಶಿಕ್ಷೆಗೆ

ಗುರಿಪಡಿಸುವನು ಎಂದು ನಿರೀಕ್ಷಿಸಲಾಗಿತ್ತು. ಆತನು ತನ್ನಷ್ಟಕ್ಕೆ ತಾನೇ ಮರಣ ದಂಡನೆನ್ನು ವಿಧಿಸಿಕೊಳ್ಳುವದಿಲ್ಲ.[5] ಇಲ್ಲವಾದರೆ, ಕರ್ತನ ಮರಣವನ್ನು ತಡೆಯುವನೆಂದು ಭಾವಿಸಿದ್ದು ಪೇತ್ರನ ಮೂರ್ಖತನವಾಗಿತ್ತು.

**ವಚನ 23.** ದಾಖಲಿಸಲ್ಪಟ್ಟ ಆತನ ಗದರುವಿಕೆಯಲ್ಲಿ ಒಂದು ಬಲವಾದ ಗದರುವಿಕೆ, ಯೇಸು **ಪೇತ್ರನಿಗೆ - ಸೈತಾನನೇ, ನನ್ನ ಮುಂದೆ ನಿಲ್ಲಬೇಡ.** ಮುಂದೆ ಆತನು ಯೇಸುವನ್ನು ಮೂರು ಬಾರಿ ಅಲ್ಲಗಳೆಯುವಾಗ ಇದನ್ನೇ ಮಾಡಿದನು, ಪೇತ್ರನು ಸೈತಾನನು ತನ್ನ ಹೃದಯವನ್ನು ಪ್ರವೇಶಿಸುವದಕ್ಕೆ ಮತ್ತು "(ಆತನನ್ನು) ಗೋದಿಯಂತೆ ಒನಿಯುವದಕ್ಕೆ" ಅನುಮತಿಸಿದನು (ಲೂಕ 22:31). ಸೈತಾನನು ಪೇತ್ರನನ್ನು "ಕ್ರೂಜೆಯಿಲ್ಲದೆ ಕಿರೀಟವನ್ನು ಹೊಂದಿಕೊಳ್ಳಲು"[6] ಯೇಸುವಿಗೆ ಶೋಧನೆಯನ್ನು ತರಲು ಉಪಯೋಗಿಸಿದನು (4:8-10ರ ಮೇಲಿನ ವ್ಯಾಖ್ಯಾನ ನೋಡಿರಿ). ಒಬ್ಬ ಮನುಷ್ಯನು ದೇವರ ಚಿತ್ತಕ್ಕೆ ವಿರುದ್ಧವಾಗಿ ನಿಲ್ಲುವಾಗ, ಆತನು ತನ್ನನ್ನು ತಾನು ಸೈತಾನನ ಪಕ್ಷದಲ್ಲಿ ಕಂಡುಕೊಳ್ಳುತ್ತಾನೆ - ಅಲ್ಲದೇ ಅವನು ತನ್ನನ್ನು ತಾನು ಆತನ ಕಾರ್ಯದಲ್ಲಿ ತೊಡಗಿಕೊಂಡಿರುವದನ್ನು ಕಂಡುಕೊಳ್ಳುತ್ತಾನೆ.[7]

17 ಮತ್ತು 23ರಲ್ಲಿ ಬಲವಾದ ಭಿನ್ನತೆ ಕಂಡುಬರುತ್ತದೆ. 17ನೇ ವಚನದಲ್ಲಿ ಪೇತ್ರನು ಯೇಸುವನ್ನು ಕ್ರಿಸ್ತನೆಂದು ಅರಿಕೆಮಾಡಿದ್ದರಿಂದ, ಅದು ಆತನಿಗೆ ದೇವರಿಂದ ಪ್ರಕಟವಾಗಿದೆ ಎಂದು ಹೇಳಿ ಆತನನ್ನು ಆಶೀರ್ವದಿಸಿದನು. ವಚನ 23ರಲ್ಲಿ, ಪೇತ್ರನ ಗದರುವಿಕೆ ಸೈತಾನನಿಂದ ಪ್ರೇರಿತವಾದದ್ದು ಎಂದು ತೋರಿಬರುತ್ತದೆ.

"ಸೈತಾನನೇ ನನ್ನನ್ನು ಬಿಟ್ಟು ತೊಲಗು" ಎಂಬುವುದು 4:10ರಲ್ಲಿನ "ಸೈತಾನನೇ ಹೊರಟು ಹೋಗು" ಎಂದು ಹೇಳಿರುವದಕ್ಕೆ ಸಮವಾಗಿದೆ. ಹಾಗಿದ್ದರೂ, ಯೇಸು ಸೈತಾನನಿಗೆ ಅಡವಿಯಲ್ಲಿ ಶೋಧಿನೆಯ ಸಮಯದಲ್ಲಿ ತನ್ನ ಪ್ರಸನ್ನತೆಯಿಂದ ಹೊರಟುಹೋಗು ಎಂದು ಹೇಳುವಂತೆ ಇಲ್ಲಿ ಆತನು ಪೇತ್ರನಿಗೆ ಶಿಷ್ಯನಾಗಿ ತನ್ನ ಸರಿಯಾದ ಪಾತ್ರವನ್ನು ಉಪಯೋಗಿಸಬೇಕೆಂದು ಅಥವಾ ಕ್ರೂಜೆಯವರೆಗೆ ಆತನನ್ನು ಹಿಂಬಾಲಿಸಲು ಆತನ ಹಿಂದೆ ಬರಬೇಕು ಎಂದು ಹೇಳುತ್ತಿರಬಹುದು.[8]

ಆತನ ವಿರೋಧದಿಂದಾಗಿ, ಪೇತ್ರನು ಯೇಸುವಿಗೆ **ನನಗೆ ನೀನು ವಿಘ್ನವಾಗಿ** ಮುಗ್ಗರಿಸುವ ಬಂಡೆಯಾಗಿದ್ದನು, "ಬಂಡೆ" ಮುಗ್ಗರಿಸುವ ಬಂಡೆಯಾಯಿತು. ಪೇತ್ರನು ಯೇಸುವಿನ ಹಿಂದೆ ಹೋಗಬೇಕೆಂದಿದ್ದಲ್ಲಿ, ಯೇಸುವು ಕ್ರೂಜೆಯೆಡೆಗೆ ಪ್ರಯಾಣಿಸುತ್ತಿರುವಾಗ ಆತನು ಯೇಸುವಿಗೆ ಎಂದಿಗೂ ಅಡತಡೆಯಾಗುತ್ತಿರಲಿಲ್ಲ.

ಯೇಸು ಪೇತ್ರನಿಗೆ, **ನಿನ್ನ ಯೋಚನೆ ಮನುಷ್ಯರ ಯೋಚನೆ ಹೊರತು ದೇವರದಲ್ಲ ಎಂದು ಹೇಳಿದನು.** ಅಪೊಸ್ತಲನು ಆತ್ಮೀಕವಾಗಿ ಯೋಚಿಸುತ್ತಿರಲಿಲ್ಲ, ಆದರೆ ಆತನು ಲೌಕಿಕವಾಗಿ ಯೋಚಿಸುತ್ತಿದ್ದನು. ಆತನು ಯೇಸುವನ್ನು ಮೆಸ್ಸೀಯನೆಂದು ಅರಿಕೆ ಮಾಡಿಕೊಂಡನು. ಆ ಪಾತ್ರದ ಅರ್ಥದ ಕುರಿತಾಗಿ ಆತನಿಗೆ ಯೇಸುವಿಗಿಂತ ವಿಭಿನ್ನವಾದ ತಿಳುವಳಿಕೆಯಿತ್ತು. ವಚನ 17ರಲ್ಲಿ, "ಮಾಂಸ ಮತ್ತು ರಕ್ತ" (ನಶ್ವರ ಮಾನವನ) ಮತ್ತು "ಪರಲೋಕದಲ್ಲಿರುವ ತಂದೆಯಾದ ದೇವರು" ಮಧ್ಯದಲ್ಲಿ ಬಲವಾದ ವ್ಯತ್ಯಾಸವನ್ನು ನೀಡಲಾಗಿದೆ. "ದೇವರ ಯೋಚನೆ" ಮತ್ತು "ಮನುಷ್ಯನ ಯೋಚನೆಯ" ಇನ್ನೊಂದು ವ್ಯತ್ಯಾಸವನ್ನು ಮಾಡಲಾಗಿದೆ.

## ಶಿಷ್ಯತ್ವದ ಕ್ರಯವನ್ನು ಯೇಸು ಪ್ರಕಟಿಸಿದ್ದು (16:24-27)

**24ಮತ್ತು ಯೇಸು ತನ್ನ ಶಿಷ್ಯರಿಗೆ ಹೇಳಿದ್ದೇನಂದರೆ - ಯಾವನಿಗಾದರೂ ನನ್ನ ಹಿಂದೆ ಬರುವದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ಹೊತ್ತು ಕೊಂಡು ನನ್ನ ಹಿಂದೆ ಬರಲಿ. 25ತನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದಿರುವವನು**

**ಅದನ್ನು ಕಳಕೊಳ್ಳುವನು; ಆದರೆ ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಕಂಡುಕೊಳ್ಳುವನು. [26]ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ಪ್ರಾಣನಷ್ಟಪಟ್ಟರೆ ಅವನಿಗೆ ಪ್ರಯೋಜನವೇನು? ಅಥವಾ ಒಬ್ಬನು ತನ್ನ ಪ್ರಾಣಕ್ಕೆ ಏನು ಈಡು ಕೊಟ್ಟಾನು? [27]ಮನುಷ್ಯಕುಮಾರನು ತನ್ನ ತಂದೆಯ ಪ್ರಭಾವದೊಡನೆ ತನ್ನ ದೂತರ ಸಮೇತವಾಗಿ ಬರುವನು; ಆವಾಗ ಆತನು ಒಬ್ಬೊಬ್ಬನಿಗೆ ಅವನವನ ನಡತೆಗೆ ತಕ್ಕ ಫಲವನ್ನು ಕೊಡುವನು.**

**ವಚನ 24.** ಅವರು ಮಾಡಬೇಕಾದ ತ್ಯಾಗಕ್ಕಾಗಿ ಅವರನ್ನು ಸಿದ್ಧಪಡಿಸುವದಕ್ಕಾಗಿ, **ಯೇಸು** ತನ್ನ ಶಿಷ್ಯರಿಗೆ ಶಿಷ್ಯತ್ವದ ನಿಜವಾದ ಅರ್ಥವನ್ನು ಬೋಧಿಸಿದನು. ಕ್ರಿಸ್ತನ ನಿಜವಾದ ಹಿಂಬಾಲಕನಾಗಲು, ಒಬ್ಬನು ತನ್ನನ್ನು ತಾನು **ನಿರಾಕರಿಸಿಕೊಳ್ಳಬೇಕು.** "ನಿರಾಕರಿಸು" (*aparneomai*) ಎಂಬ ಪದದ ಗ್ರೀಕ್ ಭಾಷೆಯ ಅರ್ಥ "ಸಂಪೂರ್ಣವಾಗಿ ನಿರಾಕರಣೆ" ಅಥವಾ "ತನ್ನನ್ನು ತಾನು ಇನ್ನೊಬ್ಬ ವ್ಯಕ್ತಿಗಾಗಿ ಸಂಪೂರ್ಣವಾಗಿ ಪ್ರತ್ಯೇಕಿಸಿಕೊಳ್ಳುವದು." ಯೇಸು ನಂತರ ಈ ಪದವನ್ನು ಪೇತ್ರನು ಆತನನ್ನು ನಿರಾಕರಿಸುವದನ್ನು ಸೂಚಿಸುವದಕ್ಕೆ ಉಪಯೋಗಿಸಿದನು (26:34, 35, 75). ಇನ್ನೊಂದು ವಿವರಣೆ *aparneomai* ಈ ಶಬ್ದಕ್ಕೆ ಇನ್ನೊಂದು ವ್ಯಾಖ್ಯಾನ "ಸಂಪೂರ್ಣವಾಗಿ ನಿಸ್ವಾರ್ಥದಿಂದ ವರ್ತಿಸುವದು." ಈ ಪದವು ಜೀವಿತವು ನಮಗೆ ಎರಡು ಅವಕಾಶವನ್ನು ನೀಡುತ್ತದೆಂದು ಪ್ರತಿಬಿಂಬಿಸುತ್ತದೆ: ನಾವು ನಮ್ಮನ್ನು ನಿರಾಕರಿಸಿಕೊಳ್ಳಬೇಕು ಇಲ್ಲವೇ ಸ್ವ - ನಿರಾಕರಣೆಗೆ ಕರೆನೀಡುವ ಕ್ರಿಸ್ತನನ್ನು ನಿರಾಕರಿಸಬೇಕು ಎಂದು ಹೇಳುತ್ತದೆ.[9]

ನಿಜವಾದ ಶಿಷ್ಯರಾಗಲು, **ಶಿಲುಬೆಯನ್ನು ಸಹ ಹೊತ್ತುಕೊಳ್ಳಬೇಕು** (ನೋಡಿರಿ 10:38) ಮತ್ತು ಯೇಸುವನ್ನು ಹಿಂಬಾಲಿಸಬೇಕು. ಲೂಕನು "ಪ್ರತಿದಿನ" ಎಂಬ ಪದವನ್ನು ಸೇರಿಸುತ್ತಾನೆ (ಲೂಕ 9:23). ಯೇಸುವಿನ ಸಮಯದಲ್ಲಿ ಕ್ರೂಜೆಯು ಕತ್ತಿನಲ್ಲಿ ಧರಿಸುವ ಇಲ್ಲವೇ ಜಾಕೇಟ ಮೇಲೆ ಹಾಕಿಕೊಳ್ಳುವ ಆಭರಣವಾಗಿರಲಿಲ್ಲ, ಬದಲಾಗಿ ಹಿಂಸೆಯ ವಿಧಾನವಾಗಿತ್ತು. ಕ್ರೂಜೆಯ ಮರಣವು ಪ್ರಾಚೀನ ಕಾಲದಲ್ಲಿ ಅತ್ಯಂತ ವೇದನಾಪೂರ್ವಕವಾದ ಅವಮಾನಕರವಾದ ಮತ್ತು ಭಯಹುಟ್ಟಿಸುವ ಮರಣ ದಂಡನೆಯಾಗಿತ್ತು ರೋಮನ್ನರು ಇದನ್ನು ತಮ್ಮ ಪ್ರಜೆಗಳು ದಂಗೆ ಏಳುವಾಗ ಅವರನ್ನು ಹಿಮ್ಮೆಟ್ಟಿಸಲು ಪರಿಣಾಮಕಾರಿಯಾಗಿ ಉಪಯೋಗಿಸುತ್ತಿದ್ದರು. ಸಾಂಪ್ರದಾಯಿಕವಾಗಿ, ಶಿಕ್ಷೆಗೆ ಗುರಿಯಾದ ಅಪರಾಧಿಗಳಿಗೆ ಕ್ರೂಜೆಗೆ ಹಾಕುವ ಸ್ಥಳಕ್ಕೆ ಹೊತ್ತುಕೊಂಡು ಹೋಗಲು ಭಾರವಾದ ಶಿಲುಬೆಯನ್ನು (*patibulum*) ಹೊರೆಸುತ್ತಿದ್ದರು (ಯೋಹಾನ 19:17).[10] ಅವರು ಶಿಲುಬೆ ಭಾರವನ್ನು ಸಹಿಸಿಕೊಳ್ಳುವದು ಮಾತ್ರವಲ್ಲ ದಾರಿಯುದ್ದಕ್ಕೂ ನಿಂತಿರುವವರ ಹಾಸ್ಯವನ್ನು ಮತ್ತು ಅವಮಾನವನ್ನು ಸಹಿಸಿಕೊಳ್ಳಬೇಕಾಗಿತ್ತು.

ಯೇಸು **ತನ್ನ ಶಿಷ್ಯರಿಗೆ** ಅವರು ಸಹ ಶ್ರಮೆಯನ್ನು ಮತ್ತು ಅವಮಾನವನ್ನು ಮತ್ತು ಆತನಿಗೆ ಸಾಯಲು ಸಿದ್ಧರಾಗಬೇಕು ಎಂದು ಹೇಳುತ್ತಿದ್ದನು. **ನನ್ನನ್ನು ಹಿಂಬಾಲಿಸು** ಎಂಬುದು ಯೇಸುವನ್ನು ಸೂಚಿಸುತ್ತದೆ ಆತನು ಕ್ರೂಜೆಯ ಮರಣಕ್ಕಾಗಿ ಯೆರೂಸಲೇಮಿಗೆ ಹೋಗುತ್ತಿದ್ದನು. ಬಹುಶಃ ಪೇತ್ರನಿಗೆ ನನ್ನನ್ನು ಬಿಟ್ಟು ಹೊರಟುಹೋಗು ಎಂಬುದು ಏಕಕಾಲದಲ್ಲಿ ಸಂಭವಿಸಿರಬಹುದು.

ಸ್ಪಷ್ಟವಾಗಿಯೂ, ಪೇತ್ರನು ತಮ್ಮಲ್ಲಿ ಯಾರು ಶ್ರಮೆಪಡಬೇಕಾಗಿಲ್ಲ ಎಂದು ಯೋಚಿಸಿದ್ದನು. ಆತನ ಯೋಚನೆ ತಪ್ಪಾಗಿತ್ತು! ನಂತರ ಯೇಸು, ಆತನು ತಾನೇ - ಕ್ರೂಜೆಯ ಮರಣದ ಮೂಲಕ ಯಾವ ರೀತಿಯ ಮರಣವನ್ನು ಅನುಭವಿಸುವನು ಎಂಬುದನ್ನು ಹೇಳಿದನು (ಯೋಹಾನ 21:18, 19). ಪೇತ್ರನು ತನ್ನನ್ನು ತಲೆಕೆಳಗೆ ಮಾಡಿ ಕ್ರೂಜೆಗೆ ಹಾಕಬೇಕೆಂದು ಕೇಳಿಕೊಂಡನು ಎಂದು ಸಂಪ್ರದಾಯವು ಹೇಳುತ್ತದೆ, ಯಾಕೆಂದರೆ ಆತನು ತನ್ನನ್ನು ತಾನು

ಯೇಸುವಿನಂತೆ ಶಿಲುಬೆಗೆ ಹಾಕಿಸಿಕೊಳ್ಳುವಷ್ಟು ಯೋಗ್ಯನಲ್ಲ ಎಂದು ಭಾವಿಸಿದ್ದನು.[11] ಈ ಎಲ್ಲಾ ಮನುಷ್ಯರು ನಿಜವಾಗಿಯೂ ಶ್ರಮೆಯನ್ನು ಅನುಭವಿಸಲೇಬೇಕಾಗಿತ್ತು.[12] ಯಾಕೋಬ ಮತ್ತು ಯೋಹಾನನ ತಾಯಿ ಮರಿಯಳು ಯೇಸುವಿನ ಬಳಿಗೆ ಬಂದು, ನಿನ್ನ ರಾಜ್ಯದಲ್ಲಿ ನನ್ನ ಮಕ್ಕಳು ನಿನ್ನ ಬಲಗಡೆ ಮತ್ತು ಎಡಗಡೆಯಲ್ಲಿ ಕುಳಿತುಕೊಳ್ಳಬಹುದೋ ಎಂದು ಕೇಳುವಾಗ, ನಾನು ಕುಡಿಯಬೇಕಾಗಿರುವ ಪಾತ್ರೆಯಿಂದ ನೀವು ಕುಡಿಯುವದು ನಿಮಿಂದಾದಿತೋ ಎಂದು ಕೇಳಿದನು, ಇದರ ಅರ್ಥ ಶ್ರಮೆ ಮತ್ತು ಮರಣದ ಪಾತ್ರೆ (20:23). ಸಂಪ್ರದಾಯದ ಪ್ರಕಾರ, ಎಲ್ಲರೂ ಆದರೆ ನಂಬಿಗಸ್ತನಾದ ಒಬ್ಬ ಅಪೊಸ್ತಲನು ಮಾತ್ರ ಹುತಾತ್ಮನಾದನು. ಯೋಹಾನನು ಇದಕ್ಕೆ ಹೊರತಾಗಿದ್ದಾನೆ ಆತನು ಹಿಂಸೆಯನ್ನು ಅನುಭವಿಸಿದನು ಮತ್ತು ಗಡಿಪಾರುಮಾಡಲ್ಪಟ್ಟನು (ಪ್ರಕಟಣೆ 1:9).

**ವಚನ 25.** ಕ್ರೂಜೆಯನ್ನು ಹೊತ್ತು ಕೊಳ್ಳುವದು ಎಂದರೆ ಒಬ್ಬನು ತನ್ನ ಜೀವಿತವನ್ನು ಕ್ರಿಸ್ತನಿಗಾಗಿ ಕಳೆದುಕೊಳ್ಳುವದು. ಯೇಸು ಹೇಳುತ್ತಾನೆ, **ತನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದಿರುವವನು ಅದನ್ನು ಕಳಕೊಳ್ಳುನು; ಆದರೆ ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಕಂಡುಕೊಳ್ಳುವನು** (ನೋಡಿರಿ 10:39).[13] ಒಬ್ಬನ ಜೀವಿತವನ್ನು ಉಳಿಸಿಕೊಳ್ಳುವದು ಎಂದರೆ ತನಗಾಗಿ ಮಾತ್ರ ಜೀವಿಸುವದು. ಇಂಥಹಾ ಜೀವಿತವು ನಿತ್ಯಜೀವಿತವನ್ನು ಕಳೆದುಕೊಳ್ಳುವದರೊಂದಿಗೆ ಮುಕ್ತಾಯವಾಗುತ್ತದೆ. ಹೆಚ್ಚು ವಿಶಿಷ್ಟವಾಗಿ, Robert H. Gundry ರವರು ಹೇಳುವಂತೆ, "ಒಬ್ಬನು ತನ್ನ ದೈಹಿಕ ಜೀವಿತವನ್ನು ಹಿಂಸೆಯ ಭಯದಿಂದಾಗಿ ಶಿಷ್ಯತ್ವವನ್ನು ನಿರಾಕರಿಸುವದರ ಮೂಲಕ ರಕ್ಷಿಸಿಕೊಳ್ಳುವದು ಅದು ನಿತ್ಯಜೀವದ ನಷ್ಟದತ್ತ ನಡೆಸುತ್ತದೆ."[14] ಈ ವಚನದಲ್ಲಿ, "ಜೀವಿತ" ಎಂಬ ಪದ ತಾತ್ಕಾಲಿಕ ಜೀವಿತವನವನಾಗಲಿ ಅಥವಾ ನಿತ್ಯಜೀವವನ್ನಾಗಲಿ ಸೂಚಿಸಬಹುದು.[15] ಯೇಸು, "ನೀವು ಯಾವದನ್ನು ಆರಿಸಿಕೊಳ್ಳುತ್ತೀರಿ ಎಂದು ಕೇಳುತ್ತಿದ್ದಾನೆ?"

**ವಚನ 26.** ಮುಂದೆ, ಕರ್ತನು, **ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ಪ್ರಾಣನಷ್ಟಪಟ್ಟರೆ ಅವನಿಗೆ ಪ್ರಯೋಜನವೇನು? ಅಥವಾ ಒಬ್ಬನನ್ನು ತನ್ನ ಪ್ರಾಣಕ್ಕೆ ಏನು ಈಡು ಕೊಟ್ಟಾನು?** ಎಂದು ಕೇಳುತ್ತಾನೆ. "ಜೀವಿತ" (16:25) ಮತ್ತು "ಆತ್ಮ" ಎಂಬ ಪದಗಳು ಅದೇ ಗ್ರೀಕ್ ಪದ (*psuchē*) ದಿಂದ ಬಂದಿವೆ. ಗ್ರೀಕ್ ಭಾಷೆಯಾಗಲಿ ಇಲ್ಲವೇ ಯೆಹೂದ್ಯರ ಭಾಷೆಗಳಾಗಿರಲಿ "ಆತ್ಮ" ಮತ್ತು "ಜೀವನದ" ಮಧ್ಯದಲ್ಲಿ ಸ್ಪಷ್ಟವಾದ ವ್ಯತ್ಯಾಸವನ್ನು ತೋರುವದಿಲ್ಲ. ಪ್ರತಿಯೊಂದು ಭಾಷೆಯಲ್ಲಿ ಒಂದು ಪದ ಎರಡೂ ಕಲ್ಪನೆಗಳನ್ನು ಸೂಚಿಸುತ್ತದೆ.[16] ಈ ಸನ್ನಿವೇಶದಲ್ಲಿ, "ಆತ್ಮ" ಎಂಬ ಪದವು ಸಾಮಾನ್ಯವಾಗಿ ಅನುವಾದ ಮಾಡಲಾಗಿದೆ.

ಒಬ್ಬನಿಗೆ ಲೋಕವನ್ನೇಲ್ಲಾ ಸಂಪಾದಿಸಲು ಸಾಧ್ಯವಾಗುತ್ತದೆ, ಅದು ಒಬ್ಬನು ತನ್ನ ಆತ್ಮವನ್ನು ನಷ್ಟಪಡಿಸಿಕೊಳ್ಳುವದಕ್ಕೆ ಯೋಗ್ಯವಾಗಿದೆಯೋ? ಲೌಕಿಕವಾದ ಎಲ್ಲಾ ಸಂಪತ್ತು ತಾತ್ಕಾಲಿಕವಾದದ್ದು (6:19-21). ಲೋಕವನ್ನೇಲ್ಲಾ ಸಂಪಾದಿಸಿ ಆತ್ಮ ನಷ್ಟಪಟ್ಟರೆ ಅದು ಒಬ್ಬನು ಮಾಡುವ ಅತ್ಯಂತ ಮೂರ್ಖತನದ ತೊಡಗಿಸುವಿಕೆಯಾಗಿದೆ (19:16-22; ಲೂಕ 12:16-21; 16:19-31). ಐಶ್ವರ್ಯವನ್ನು ಹೊಂದಿಕೊಳ್ಳಬಹುದು ಮತ್ತು ಕಳೆದುಕೊಳ್ಳಬಹುದು, ಆದರೆ ಪ್ರತಿಯೊಬ್ಬ ವ್ಯಕ್ತಿಗೆ ಒಂದೇ ಒಂದು ಆತ್ಮವಿರುತ್ತದೆ. ಪರಲೋಕದಲ್ಲಿ ಸಂಪತ್ತನ್ನು ಮಾಡಿಟ್ಟುಕೊಳ್ಳುವದು ಎಂದರೆ ಅದನ್ನು ಶಾಶ್ವತವಾಗಿಟ್ಟುಕೊಳ್ಳುವದು ಎಂದರ್ಥ. ಒಬ್ಬನು ಅದನ್ನು (*antallagma*) "ಬದಲಾಯಿಸಲು" ಸಾಧ್ಯವಿಲ್ಲ ಅಥವಾ ಆತ್ಮ ನಷ್ಟಪಟ್ಟ ನಂತರ ಅದನ್ನು "ತಿರುಗಿ ಕೊಂಡುಕೊಳ್ಳಲು" ಸಾಧ್ಯವಿಲ್ಲ.

**ವಚನ 27.** ಯೇಸು ಒಬ್ಬನು ಯಾಕೆ ತನ್ನನ್ನು ತಾನು ನಿರಾಕರಿಸಿ, ತನ್ನ ಕ್ರೂಜೆಯನ್ನು ಹೊತ್ತುಕೊಂಡು ಆತನನ್ನು ಹಿಂಬಾಲಿಸಬೇಕು ಎಂಬುದರ ಕುರಿತು ತನ್ನ ವಿವರಣೆಯನ್ನು ಮುಂದುವರಿಸಿದನು: **ಮನುಷ್ಯಕುಮಾರನು ತನ್ನ ತಂದೆಯ ಪ್ರಭಾವದೊಡನೆ ತನ್ನ ದೂತರ**

**ಸಮೇತವಾಗಿ ಬರುವನು; ಅವಾಗ ಆತನು ಒಬ್ಬೊಬ್ಬನಿಗೆ ಅವನವನ ನಡತೆಗೆ ತಕ್ಕ ಫಲವನ್ನು ಕೊಡುವನು** ಎಂದು ಹೇಳುತ್ತಾನೆ. ತನ್ನ ಕಾರಣವನ್ನು ನೀಡುತ್ತಾ, ಆತನು ಹೇಳುತ್ತಾನೆ, "ತಂದೆಯ ಪರವಾಗಿ" ಮತ್ತು "ಅವಾಗ" ಎಂಬ ಪದವನ್ನು ಮೂರನೇ ಬಾರಿಗೆ ಹೇಳುತ್ತಾನೆ. ಇಲ್ಲಿ ಆತನು ಒಬ್ಬನು ಬರಲಿಕ್ಕಿರುವ ನ್ಯಾಯವಿಚಾರಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಸ್ವ-ನಿರಾಕರಣೆಯ ಜೀವಿತವನ್ನು ಜೀವಿಸಬೇಕು. ಕರ್ತನು ತನ್ನ "ಮಹಿಮೆಯೊಡನೆ" ("ರಾಜ ಪ್ರಖ್ಯಾತಿ") ಯೊಂದಿಗೆ ಬರುತ್ತಾನೆ, ಮತ್ತು ಆತನು ತನ್ನ "ದೇವ ದೂತರ" ಸಂಗಡ ಬರುವನು (25:31; 1 ಥೆಸಲೋನಿಕ 4:16; 2 ಥೆಸಲೋನಿಕ 1:7). ಆತನ ಎರಡನೇ ಬರೋಣ ಆತನ ಮೊದಲನೆ ಬರೋಣದ ರೀತಿಯಲ್ಲಿ ಇರುವದಿಲ್ಲ. ಆತನು ತಿರುಗಿ ಬರುವಾಗ ಎಲ್ಲರಿಗೂ ಗೊತ್ತಾಗುತ್ತದೆ (ಪ್ರಕಟಣೆ 1:7). ಆತನು ಮಾನವ ಕುಲಕ್ಕೆ ನ್ಯಾಯತೀರಿಸಲು ಬರುತ್ತಾನೆ. ಪ್ರತಿಯೊಬ್ಬ ವ್ಯಕ್ತಿಯೂ ಅವನ ಅಥವಾ ಅವಳ ಪ್ರತಿಫಲವನ್ನು ಹೊಂದುತ್ತಾರೆ. ಆ ನ್ಯಾಯ ತೀರ್ಪು ಮಾನವರ "ಕಾರ್ಯಗಳ" ಮೇಲೆ ಆಧಾರಗೊಂಡಿದೆ (ರೋಮಾಪುರ 2:5-7; 2 ಕೊರಿಂಥ 5:10; 11:15; 1 ಪೇತ್ರ 1:17; ಪ್ರಕಟಣೆ 2:23; 20:12, 13; 22:12). ಅದು ಆತನ ಮಾತುಗಳನ್ನು ಆಧರಿಸಿರುತ್ತದೆ (12:36, 37) ಮತ್ತು ಆತನು ಯೋಚಿಸಿದ ರಹಸ್ಯ ಸಂಗತಿಗಳು ಆಡಗಿಸಲ್ಪಡುತ್ತವೆ (ಪ್ರಸಂಗಿ 12:14). ಎಲ್ಲಾ ನ್ಯಾಯ ತೀರ್ಪು ಕ್ರಿಸ್ತನ ಮಾತುಗಳ ಮೇಲೆ ಆಗುವಂತಹ ತೀರ್ಪಾಗಿದೆ (ಯೋಹಾನ 12:48).

## ಯೇಸುವಿನ ವಾಗ್ದಾನವೇನೆಂದರೆ ಕೆಲವರು ರಾಜ್ಯವನ್ನು ನೋಡುವರು (16:28)

**[28]ನಿಮಗೆ ನಿಜವಾಗಿ ಹೇಳುತ್ತೇನೆ, ಇಲ್ಲಿ ನಿಂತವರೊಳಗೆ ಕೆಲವರು, ಮನುಷ್ಯಕುಮಾರನು ತನ್ನ ರಾಜ್ಯದಲ್ಲಿ ಬರುವದನ್ನು ನೋಡುವ ತನಕ ಮರಣಹೊಂದುವದಿಲ್ಲ ಅಂದನು.**

**ವಚನ 28.** ಯೇಸು ಅಪೊಸ್ತಲರಿಗೆ ಅವರಲ್ಲಿ ಕೆಲವರು **ತನ್ನ ರಾಜ್ಯವು** ಬಲದೊಂದಿಗೆ ಬರುವದನ್ನು ನೋಡುವವರೆಗೆ ಜೀವದಿಂದಿರುತ್ತಾರೆಂದು ಹೇಳುತ್ತಾನೆ (ಮಾರ್ಕ 9:1). ಪಂಚಶತಮ ದಿನದಂದು ದೇವರ ರಾಜ್ಯ ಇಳಿದು ಬರುವಾಗ ತನ್ನ ಜೀವವನ್ನು ತಾನೇ ತೆಗೆದುಕೊಂಡ ಯೂದನನ್ನು ಹೊರತುಪಡಿಸಿ ಎಲ್ಲರೂ ಉಪಸ್ಥಿತರಿದ್ದರು (ಅಪೊಸ್ತಲರ ಕೃತ್ಯಗಳು 1:15-2:4). ಉಳಿದ ಹನ್ನೊಂದು ಜನರು ದೇವರ ರಾಜ್ಯ (ಸಭೆ) ಅಸ್ತಿತ್ವಕ್ಕೆ ಬಂದ ಕೆಲವು ವರ್ಷಗಳವರೆಗೆ **ಮರಣದ ರುಚಿ** ನೋಡಿರಲಿಲ್ಲ. "ಮರಣದ ರುಚಿ" ಎನ್ನುವದು ಮರಣದ *ಅನುಭವಿಸುವದು* ಎಂದು ಹೇಳುವ ಒಂದು ನಾಣ್ಣುಡಿಯಾಗಿದೆ (ಯೋಹಾನ 8:52; ಇಬ್ರಿಯ 2:9). ದೇವರ ವಾಕ್ಯವು ರಾಜ್ಯವು ಇಲ್ಲಿದೆ ಎಂದು ಬೋಧಿಸುತ್ತದೆ (1 ಕೊರಿಂಥ 15:24-28; ಕೊಲಸ್ಸೆ 1:13; ಇಬ್ರಿಯ 12:28; ಪ್ರಕಟಣೆ 1:9). "ತನ್ನ ರಾಜ್ಯದೊಂದಿಗೆ ಬರುತ್ತಾನೆ" ಎಂಬ ವಾಕ್ಯಭಾಗ, ಅರ್ಥವು ಖಂಡಿತವಾಗಿಯೂ ಆತನು ತನ್ನ ರಾಜ್ಯವನ್ನು ಅರಸನಂತೆ ಪ್ರವೇಶಿಸುತ್ತಾನೆ ಮತ್ತು ಕ್ರೈಸ್ತ ಯುಗದಲ್ಲಿ ಒಡೆಯನಾಗಿ ಬರುತ್ತಾನೆ ಎಂದು ಅರ್ಥವನ್ನು ಕೊಡುತ್ತದೆ (ಅಪೊಸ್ತಲರ ಕೃತ್ಯಗಳು 2:33-36).[17]

28ನೇ ವಚನದಲ್ಲಿ ಕೊಟ್ಟಿರುವ ಇನ್ನೊಂದು ಅರ್ಥೈಸುವಿಕೆ ಸಮಂಜಸವಾಗಿಲ್ಲ ಮತ್ತು ಸಾಧ್ಯವಿಲ್ಲ. (1) ಅದು 17ನೇ ಅಧ್ಯಾಯದಲ್ಲಿ ಬರುವ ರೂಪಾಂತರವನ್ನು ಸೂಚಿಸುತ್ತದೆ ಎಂದು ವಾದಿಸಲಾಗಿದೆ. ಹಾಗಿದ್ದರೂ, ಆ ಸಂಗತಿಯು ಕೇವಲ ಆರು ದಿನಗಳ ನಂತರ ನಡೆಯಿತು (17:1). ಇಂಥಹಾ ಘಟನೆ ಈ ಸಮಯದ ಸರಣಿಯಲ್ಲಿ ಸೂಚಿಸಿರುವವುಗ ಳೊಂದಿಗೆ ಹೊಂದಿಕೆಯಾಗುವದಿಲ್ಲ. ರೂಪಾಂತರವು ದೇವರ ರಾಜ್ಯವನ್ನು ಸ್ಥಾಪನೆಯನ್ನು ತೋರಿಸುವದಿಲ್ಲ, ಬದಲಾಗಿ ಅದು ದೇವರ ರಾಜ್ಯವು ಬರುವಾಗ ಮತ್ತೆ ಆನಂದಿಸಬಹುದಾದ ಯೇಸುವಿನ ಮಹಿಮೆಯನ್ನು ಪ್ರಕಟಿಸುತ್ತದೆ (ಯೋಹಾನ 17:5).

(2) ಈ ವಚನವು ಕ್ರಿ.ಶ. 70ರಲ್ಲಿ ಯೆರೂಸಲೇಮಿನ ನಾಶನವನ್ನು ಸೂಚಿಸುತ್ತದೆ. ಅದೇ ಸಮಯದಲ್ಲಿ ಯೆರೂಸಲೇಮಿನ ಅವನತಿ ದೇವರ ನ್ಯಾಯತೀರ್ಪಿನ ಪ್ರಕಟನೆಯಾಗಿದೆ, ಇದನ್ನು ಕ್ರಿಸ್ತನ ರಾಜ್ಯದ ಬರೋಣಕ್ಕೆ ಹೋಲಿಸಲು ಸಾಧ್ಯವಿಲ್ಲ. ದೇವರ ರಾಜ್ಯದ ಬರೋಣ ಯೆರೂಸಲೇಮಿನ ಪತನದ ಕೆಲವು ವರ್ಷಗಳ ಪೂರ್ವದಲ್ಲಿಯೇ ಸಂಭವಿಸಿದೆ (ನೋಡಿರಿ ಕೊಲಸ್ಸೆ 1:13; ಪ್ರಕಟಣೆ 1:6).

(3) ಇನ್ನು ಮುಂದಕ್ಕೆ, ಈ ವಚನವು ಕ್ರಿಸ್ತನ ಎರಡನೇ ಬರೋಣಕ್ಕೆ ಸಂಬಂಧಿಸಿದ್ದಲ್ಲ. ಯೇಸು ಈ ಘಟನೆ ಯಾವಾಗ ಸಂಭವಿಸುತ್ತದೆ ಎಂಬುದು ತನಗೂ ಸಹ ತಿಳಿದಿಲ್ಲ ಎಂದು ಹೇಳುತ್ತಾನೆ (24:36; ಮಾರ್ಕ 13:32), ಆದರೆ ಈ ವಚನದಲ್ಲಿ ಆತನು ಅಪೊಸ್ತಲರ ಜೀವಿತದ ಸಮಯದಲ್ಲಿ ದೇವರ ರಾಜ್ಯ ಬರಲಿಕ್ಕಿರುವದರ ಕುರಿತು ಮಾತನಾಡುತ್ತಾನೆ. ಇದಕ್ಕೆ ವ್ಯತಿರಿಕ್ತವಾಗಿ ಸಹಸ್ರ ವಾರ್ಷಿಕ ಅವಧಿಯ ಸಿದ್ಧಾಂತಗಳು ಯೇಸು ತನ್ನ ರಾಜ್ಯವನ್ನು ಸ್ಥಾಪಿಸುವದಕ್ಕಾಗಿ ತಿರುಗಿ ಬರುತ್ತಿಲ್ಲ. ಆತನು ಅದನ್ನು ತನ್ನ ಆರೋಹಣದ ನಂತರ ಪಂಚಾಶತ್ತಮ ದಿನದಲ್ಲಿ ಅದನ್ನು ಸ್ಥಾಪಿಸಿದ್ದಾನೆ ಎಂದು ಹೇಳುತ್ತವೆ.

### ಪಾಠಗಳು

## ಕಳೆದು ಹೋಗಿತ್ತು ಮತ್ತು ಕಂಡುಕೊಳ್ಳಲಾಯಿತು (16:24-27)

ಯೇಸು ದೀನತೆಯ ಪ್ರಾಮುಖ್ಯತೆಯನ್ನು ಬೋಧಿಸಿದನು (23:11; ಲೂಕ 14:11; 18:14). ಆತನು "ನಿನ್ನ ಮನಸ್ಸನ್ನು ನಿನ್ನ ಮೇಲಿನಿಂದ ತೆಗೆದುಬಿಡು, ಮತ್ತು ನಿನ್ನ ಮನಸ್ಸಿನೊಳಗಿಂದ ನಿನ್ನನ್ನು ತೆಗೆದುಬಿಡು" ಎಂದು ಪರಿಣಾಮಕಾರಿಯಾಗಿ ಹೇಳುತ್ತಾನೆ.

ನಾವು ಕಳೆದುಕೊಳ್ಳಲೇಬೇಕಾದ ಕೆಲವು ಸಂಗತಿಗಳು ಯಾವವು?

1. *ಸ್ವಾರ್ಥ.* ಸ್ವಾರ್ಥಿಗಳಾದ ಜನರು ಅಪ್ರಬುದ್ಧ ಜನರು. ಯೇಸು ಸ್ವ-ನಿರಾಕರಣೆಯನ್ನು ಬೋಧಿಸಿದ್ದಾನೆ.

2. *ಸ್ವಾರ್ಥ ಕೇಂದ್ರಿಕರಿಸಿರುವದು.* ಏದೇನ್ ತೋಟದಲ್ಲಿ ನಿಜವಾದ ಸಮಸ್ಯೆ ಎಂದರೆ ಆದಾಮ ಮತ್ತು ಹವ್ವಳು ತಾವೇ ದೇವರಾಗಲು ಬಯಸಿದ್ದರು. ಅಹಂಕಾರ ಅವರ ಸಮಸ್ಯೆಯಾಗಿತ್ತು.

3. *ಆತ್ಮ ಪ್ರಜ್ಞೆ.* ಲೋಕವು "ನಿಮ್ಮನ್ನು ತಿಳಿದುಕೊಳ್ಳಿ" ಎಂದು ಬೋಧಿಸುತ್ತದೆ. ಕೆಲವರು "ನಿಮ್ಮ ಸ್ವಂತಿಕೆ ನಿಜವಾಗಿದೆ" ಎಂದು ಬೋಧಿಸುತ್ತಾರೆ.

ಇದಕ್ಕೆ ಭಿನ್ನವಾಗಿ, ಸತ್ಯವೇದವು ಸ್ವಾರ್ಥದ ಕುರಿತು ಮೂರು ತತ್ವಗಳನ್ನು ಅನುಸರಿಸಬೇಕೆಂದು ಬೋಧಿಸುತ್ತದೆ: ನಮ್ಮನ್ನು ನಾವು ಬಿಟ್ಟುಕೊಡಬೇಕು, ನಮ್ಮನ್ನು ನಾವು ನಿರಾಕರಿಸಿಕೊಳ್ಳಬೇಕು, ಮತ್ತು ನಮ್ಮನ್ನು ನಾವು ಕಳೆದುಕೊಳ್ಳಬೇಕು.

## ಒಬ್ಬನು ತನ್ನ ಜೀವಿತ ಕಳೆದುಕೊಳ್ಳುವದು (16:25)

ಒಬ್ಬನು ಅವಶ್ಯವಿದ್ದಲ್ಲಿ ತನ್ನ ಜೀವಿತವನ್ನು ಕ್ರಿಸ್ತನಿಗಾಗಿ ಸ್ವ-ಇಚ್ಛೆಯಿಂದ ನೀಡುವದಕ್ಕಾಗಿ ಸಿದ್ಧನಾಗಿರಬೇಕು, ಕ್ರೂಜೆಯನ್ನು ಹೊತ್ತುಕೊಳ್ಳುವದು ಎಂದರೂ ಸಹ ಲೋಕದಲ್ಲಿ ಕ್ರಿಸ್ತನ ಕಾರ್ಯಗಳನ್ನು ಮಾಡಲು ತನ್ನನ್ನು ತಾನು ಕಳೆದುಕೊಳ್ಳುವದು. ಅದು ತಪ್ಪಿಹೋದವರನ್ನು ಹುಡುಕುವದಾಗಿರಬಹುದು, ರಕ್ಷಣೆ ಹೊಂದಿದವರನ್ನು ರಕ್ಷಣೆಯ ಅನುಭವದಲ್ಲಿ ಇಡುವದು, ಬಿದ್ದು ಹೋದವರನ್ನು ಪುನರುಜ್ಜೀವಗೊಳಿಸುವದು. ಇದರ ಅರ್ಥ "ಪರಿಶುದ್ಧವಾದ ಕಳಂಕರಹಿತವಾದ ಧರ್ಮವನ್ನು" ಅಭ್ಯಾಸಿಸುವದು, "ಅನಾಥರನ್ನು, ವಿಧವೆಯನ್ನು ಅವರ ದುರವಸ್ಥೆಯಲ್ಲಿ ಭೇಟಿಯಾಗುವದು" ಮತ್ತು "ಪ್ರಪಂಚದ ದೋಷ ಹತ್ತದಂತೆ ನಮ್ಮನ್ನು ಕಾಪಾಡಿಕೊಳ್ಳುವದು" (ಯಾಕೋಬ 1:27). ಇಂಥಹ ಸಮರ್ಪಣೆಯ ಜೀವಿತವನ್ನು

ಜೀವಿಸುವದರ ಪರಿಣಾಮ ನಿತ್ಯಜೀವ.

## ರಕ್ಷಣೆ ಹೊಂದುವ ಆಪೇಕ್ಷೆ (16:26)

ನಮ್ಮ ಜೀವಿತದಲ್ಲಿ ಸಂಭವಿಸಬಹುದಾದ ಅತ್ಯಂತ ದುಃಖಕರವಾದ ಸಂಗತಿ ಯಾವುದು? ಉದ್ಯೋಗವನ್ನು ಕಳೆದುಕೊಳ್ಳುವದೋ? ಪ್ರೀತಿಪಾತ್ರರನ್ನು ಕಳೆದುಕೊಳ್ಳುವದೋ? ಆರೋಗ್ಯವನ್ನು ಕಳೆದುಕೊಳ್ಳುವದೋ? ನಿಜವಾಗಿಯೂ ಇವು ಯಾವು ಅಲ್ಲ. ಯೇಸು ಇದಕ್ಕೆ ಉತ್ತರವನ್ನು ಮತ್ತಾಯ 16:26ರಲ್ಲಿ ತನ್ನ ಉತ್ತರ ಕೊಟ್ಟಿದ್ದಾನೆ. ಒಬ್ಬನ ಜೀವನದಲ್ಲಿ ಅತ್ಯಂತ ದುಃಖಕರವಾದ ಸಂಗತಿ ಎಂದರೆ ಆತ್ಮ ನಷ್ಟಪಡಿಸಿಕೊಳ್ಳುವದು. ಯಾರೊಬ್ಬರು ನಷ್ಟಪಡಿಸಿಕೊಳ್ಳಬಾರದು; ದೇವರು ರಕ್ಷಣೆಗೆ ಎಲ್ಲಾ ಅನೂಕೂಲತೆಗಳನ್ನು ಮಾಡಿದ್ದಾನೆ. ಯಾರಾದರೂ ನಷ್ಟಪಟ್ಟರೆ, ದೇವರನ್ನು ದೂರಲು ಸಾಧ್ಯವಿಲ್ಲ (ರೋಮಾಪುರ 2:1).

ರಕ್ಷಣೆಗೆ ಪ್ರಾಪಂಚಿಕವಾದವುಗಳನ್ನು ಹೊಂದಿಕೊಳ್ಳುವ, ಶಿಕ್ಷಣವನ್ನು ಹೊಂದಿಕೊಳ್ಳುವ ಅಥವಾ ಹೆಸರನ್ನು ಹೊಂದಿಕೊಳ್ಳುವ ಅವಶ್ಯಕತೆಯಿಲ್ಲ. ಒಬ್ಬ ವ್ಯಕ್ತಿ ಮಾಡಬೇಕಾದದ್ದು ಇಷ್ಟೇ ಸುವಾರ್ತೆಗೆ ವಿಧೇಯರಾಗಬೇಕು ಮತ್ತು ದೇವರನ್ನು ಮೆಚ್ಚಿಸುವ ಬಯಕೆಯನ್ನು ಹೊಂದಿಕೊಳ್ಳಬೇಕು, ಇದರೊಂದಿಗೆ ತನಗಿರುವ ರಕ್ಷಣೆಯ ಅವಶ್ಯಕತೆಯನ್ನು ಒಪ್ಪಿಕೊಳ್ಳಬೇಕು ಮತ್ತು ದೇವರು ಆಜ್ಞಾಪಿಸಿದ್ದನ್ನು ಮಾಡಲು ಸಿದ್ಧರಾಗಿರಬೇಕು.

---

ಟಿಪ್ಪಣೆಗಳು

[1]Craig S. Keener, *A Commentary on the Gospel of Matthew* (Grand Rapids, Mich.: Wm. B. Eerdmans Publishing Co., 1999), 421. [2]William Hendriksen, *New Testament Commentary: Exposition of the Gospel According to Matthew* (Grand Rapids, Mich.: Baker Book House, 1973), 654. [3]ಮತ್ತಾಯ 12:40; 16:21; 17:23; 20:19; 26:61; 27:40, 63, 64; ಮಾರ್ಕ 8:31; 9:31; 10:34; 14:58; 15:29; ಲೂಕ 9:22; 13:32; 18:33; 24:7, 21, 46; ಯೋಹಾನ 2:19; ಅಪೊಸ್ತಲರ ಕೃತ್ಯಗಳು 10:40; 1 ಕೊರಿಂಥ 15:4. [4]Michael J. Wilkins, "Matthew," in *Zondervan Illustrated Bible Backgrounds Commentary*, vol. 1, *Matthew*, *Mark*, *Luke*, ed. Clinton E. Arnold (Grand Rapids, Mich.: Zondervan, 2002), 104. [5]Douglas R. A. Hare, *Matthew*, Interpretation (Louisville: John Knox Press, 1993), 194. [6]Hendriksen, 655. [7]W. F. Albright and C. S. Mann, *Matthew*, The Anchor Bible (Garden City, N.Y.: Doubleday & Co., 1971), 200. [8]Hare, 194. [9]Jack P. Lewis, *A Commentary on the Gospel According to Matthew*, Part 2, The Living Word Commentary (Austin, Tex.: Sweet Publishing Co., 1976), 41–42. [10]Plutarch *Moralia* 554B.

[11]ಆರಂಭದ ಒಂದು ಸಂಪ್ರದಾಯ ಪೇತ್ರನು ಹುತಾತ್ಮನಾದನು ಎಂದು ಹೇಳುತ್ತದೆ, ಆದರೆ ಅದು ಯಾವ ರೀತಿಯಲ್ಲಿ ಗಲ್ಲಿಗೆ ಹಾಕಿದರೆಂದು ಹೇಳಿರುವದಿಲ್ಲ (*1 Clement* 5.4). ತರುವಾಯ ಬಂದ ದಾಖಲೆಗಳು ಆತನಿಗೆ ತಲೆ ಕೆಳಗೆ ಮಾಡಿ ಶಿಲುಬೆಗೆ ಹಾಕಿ ಕೊಂದರು ಎಂದು ಹೇಳುತ್ತವೆ (Eusebius Ecclesiastical History *3.1; Acts of Peter 37*–39). ಇಂಥಹ ಒಂದು ಸಂಪ್ರದಾಯ ಖಂಡನೆಗೆ ಒಳಗಾಯಿತು, ತಲೆಕೆಳಗಾಗಿ ಮಾಡಿ ಶಿಲುಬೆಗೆ ಹಾಕುವ ಅಭ್ಯಾಸವು ಹಿಂದಿನ ದಿನಗಳಲ್ಲಿ ನಡೆದಿರುವ ಉದಾಹರಣೆಗಳು ಆಗಿವೆ (Seneca *Consolation to Marcia* 20). [12]ಈ ಹೇಳಿಕೆಯು ಯೂದನನ್ನು ಹೊರತುಪಡಿಸಿ ಯೇಸುವನ್ನು ವಂಚನೆ ಮಾಡಿದವನನ್ನು ಬಿಟ್ಟು ಉಳಿದೆಲ್ಲರನ್ನು ಸೂಚಿಸುತ್ತದೆ. [13]ಯೆಹೂದ್ಯರ ಬರವಣಿಗೆಯಲ್ಲಿ ಸಮನಾಂತರವಾದ ಆಲೋಚನೆಗಳಿಗಾಗಿ, ನೋಡಿರಿ *1 Enoch* 108.10; *2 Baruch* 51.15, 16; Mishnah *Aboth* 4.17; Talmud *Tamid* 32a. [14]Robert H. Gundry, *Matthew: A Commentary on His Literary and Theological Art* (Grand Rapids, Mich.: Wm. B. Eerdmans Publishing Co., 1982), 340. [15]J. W. McGarvey, *The New Testament Commentary,* vol. 1*, Matthew and Mark* (N.p., 1875; reprint, Delight, Ark.: Gospel Light Publishing Co., n.d.), 148. [16]Lewis, *Matthew,* 42. [17]McGarvey, 149.